ದಿ.06.03.2019. C C 244/2017 PW-1

ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ೯ ಸವಾಲು ಶ್ರೀ ಹೆಚ್ ಕೆ ಹೆಚ್ ವಕೀಲರಿಂದಃ**

1. ಆರೋಪಿ ನಾನು ಒಂದೇ ಗ್ರಾಮದವರು ಹಾಗಾಗಿ ನಾನು ಹುಟ್ಟಿದಾರಾಬ್ಯ ಆರೋಪಿ ಪರಿಚಯ. ಆರೋಪಿಯನ್ನು ತಿಪ್ತೂರಿನ ವ್ಯಕ್ತಿಗೆ ಮದುವೆ ಮಾಡಿಕೊಡಲಾಗಿತ್ತು ಆರೋಪಿಯ ಗಂಡ ಸಹ ಪರಿಚಯ. ಆರೋಪಿಯ ಗಂಡ ಹಾಗೂ ನಾನು ನಮ್ಮೂರಿನಲ್ಲಿ ಇದ್ದಾಗ ಆತ್ಮೀಯರಾಗಿದ್ದೆವು. ಸದರಿ ಮೊಕ್ಕದ್ದಮೆಯನ್ನು ಸಲ್ಲಿಸಿದಾಗ ಆರೋಪಿ ತಿಪ್ತೂರಿನಲ್ಲಿ ವಾಸವಿದ್ದರು. ಈ ಮೊಕ್ಕದ್ದವೆಯನ್ನು ಸಲ್ಲಿಸಿದ ಸಂದರ್ಭದಲ್ಲಿ ಆರೋಪಿ ಹಾಗೂ ಅವರ ಗಂಡ ಬೇರೆ ಬೇರೆ ವಾಸವಿದ್ದರು ಎಂದರೆ ಸುಳ್ಳು. ಆರೋಪಿ ಈ ಮೊಕ್ಕದ್ದಮೆಯನ್ನು ಸಲ್ಲಿಸಿದ ಸಮೀಪದಲ್ಲಿ ಬಿಡದಿಯಲ್ಲಿ ವಾಸವಿದ್ದರು ಎಂದರೆ ಸುಳ್ಳು ಆರೋಪಿಯ ಗಂಡ ತಿಪ್ತೂರಿನಲ್ಲಿ ವಾಸವಿದ್ದರು ಎಂದರೆ ಆರೋಪಿ ಹಾಗೂ ಆಕೆಯ ಗಂಡ ಒಟ್ಟಿಗೆ ತಿಪ್ತೂರಿನಲ್ಲಿ ವಾಸವಿದ್ದರು.

2. ಆರೋಪಿ ಗೃಹಿಣಿ. ಈಗಲು ಸಹ ಆರೋಪಿ ಹೊರಗಡೆ ಎಲ್ಲೂ ಕೆಲಸ ಮಾಡುವುದಿಲ್ಲ. ಆರೋಪಿಯ ಗಂಡ ಖರೀದಿಸಿದ 4 ಚಕ್ರವಾಹನದ ಬಗ್ಗೆ ಮಾಹಿತಿ ಇದೆಯೇ ಎಂದರೆ ಇದೆ, ಇದನ್ನು ಸಾಲವಾಗಿ ಪಡೆದಿದ್ದರು ಇದರ ತೀರುವಳಿಗಾಗಿಯೇ ನನ್ನಿಂದ ಸಾಲ ಪಡೆದಿದ್ದಾರೆ. ಸದರಿ ವಾಹನವನ್ನು ಮಂಡ್ಯದಲ್ಲಿ ಖರೀದಿಸಿದ್ದೇವೆ ಎಂದು ತಿಳಿಸಿದ್ದರು. ಆರೋಪಿ ಗಂಡ ಸದರಿ ವಾಹನದ ಮೇಲೆ ಸಾಲ ಪಡೆದ ಸಂಸ್ಥೆಯ ಹೆಸರು, ಮೊತ್ತ ಇತರೆ ವಿವರಗಳು ನನಗೆ ಗೊತ್ತಿಲ್ಲ. ಸದರಿ ವಾಹನದ ಸಂಖ್ಯೆ ಗೊತ್ತಿಲ್ಲ ಆದರೆ ಅದು ಟಾಟಾ ಎಸಿ ಎಂಬುದು ಗೊತ್ತು, ಆರೋಪಿ ಕಟ್ಟಬೇಕಿದ್ದ ಸಾಲದ ಮೊತ್ತದ ತಿಳುವಳಿಕಾ ಪತ್ರ ವಗ್ಯೆರೆ ದಾಖಲೆಗಳನ್ನು ನಾನು ನೋಡಿಲ್ಲ.

3. 2015 ರ ಡಿಸೆಂಬರ್ ಮಾಹೆಯ ಕೊನೆಯ ವಾರದಲ್ಲಿ ಆರೋಪಿ ನನ್ನಿಂದ ಸಾಲ ಕೇಳಿದ್ದರು. ನಿಖರವಾಗಿ ಇದರ ದಿನಾಂಕ ನನಗೆ ನೆನಪಿಲ್ಲ.

ಆರೋಪಿಗೆ ಯಾವ ದಿನಾಂಕದಂದು ನಾನು ಸಾಲವನ್ನು ನೀಡಿದ್ದೇನೆಂದು ಹೇಳಲು ಆಗುವುದಿಲ್ಲ ಆದರೆ 2016 ರ ಜನವರಿ ಮಾಹೆಯಲ್ಲಿ ನೀಡಿದ್ದೇನೆ. ಆರೋಪಿ ಸಾಲವನ್ನು ನನ್ನ ಮನೆಯಲ್ಲಿ ಬಂದು ಕೇಳಿರುತ್ತಾರೆ.

4. ರೂ. 3 ಲಕ್ಷ ವನ್ನು ನಾನು ನಮ್ಮ ಮನೆಯಲ್ಲಿ ಇಟ್ಟು ಕೊಂಡಿದ್ದೆ. ಮೂಲತಃ ನಾನು ರೇಷ್ಮ ಹುಳು ಸಾಕಾಣಿಕೆ ಮಾಡುತ್ತೇನೆ. ಇದಲ್ಲದೇ ಕುರಿ ಸಾಕಾಣಿಕೆ ಹಾಗೂ ಹೈನುಗಾರಿಕೆ ಮಾಡುತ್ತೇನೆ. ನಾನು ಹಾಗೂ ನನ್ನ ಸಹೋದರರು ಒಟ್ಟು ಕುಟುಂಬದಲ್ಲಿ ಇದ್ದೇವೆ ನಮ್ಮ ಕುಟುಂಬದ 5 ಎಕರೆ ಆಸ್ತಿ ನನ್ನ ತಾಯಿಯ ಹೆಸರಿನಲ್ಲಿದೆ. ಕುಟುಂಬದ ನಿರ್ವಹಣೆಯನ್ನು ನಾನು ಮಾಡುತ್ತೇನೆ. ನಾನು ಬಿ ಪಿ ಎಲ್ ಪಡಿತರ ಚೀಟಿಯನ್ನು ಹೊಂದಿದ್ದೇನೆ. ನಾನು ಯಾವುದೇ ಹಣಕಾಸಿನ ಸಂಸ್ಥೆಯಲ್ಲಿ ಸಾಲ ಪಡೆದಿಲ್ಲ. ಸರ್ಕಾರದಿಂದ ಬೆಳೆ ನಷ್ಟದ ಬಾಬ್ತು ಪರಿಹಾರದ ಹಣವನ್ನು ಪಡೆದಿಲ್ಲ. ನಾನು ಯಾವುದೇ ಸಹಕಾರ ಸಂಘಗಳಲ್ಲಿ ಸದಸ್ಯನಾಗಿಲ್ಲ.

5. ನನ್ನ ಅಕ್ಕನ ಮಗಳ ಮದುವೆ ನಿಗದಿಯಾಗಿತ್ತು. ಆಕೆಗೆ ಒಡವೆ ಮಾಡಿಸಲು ರೂ. 3 ಲಕ್ಷ ನಗದನ್ನು ಮನೆಯಲ್ಲಿ ಇಟ್ಟು ಕೊಂಡಿದ್ದೆ. ನನ್ನ ಅಕ್ಕನ ಮಗಳ ಮದುವೆಯಾಗಿ ಹಾಲಿ 8 ತಿಂಗಳು ಆಗಿವೆ. ದಿ.24.10.2016 ರಂದು ಆರೋಪಿಯನ್ನು ಅವರ ಊರಿಗೆ ಹೋಗಿ ಬೇಟಿ ಆಗಿದ್ದೇನೆ. ಇದಲ್ಲದೆ ಹಿಂದೆಯು ಸಹ ಆರೋಪಿಯನ್ನು ಹಲವಾರು ಬಾರಿ ಹಣವನ್ನು ವಾಪಸ್ಸು ಮಾಡುವಂತೆ ಕೇಳಿರುತ್ತೇನೆ ನಿಪಿ-1 ನ್ನು ಆರೋಪಿಯೇ ಭರಿಸಿಕೊಟ್ಟಿರುತ್ತಾರೆ. ನಿಪಿ-1 ನ್ನು ಆಂಗ್ಲ ಭಾಷ್ಷೆಯಲ್ಲಿ ಬರ್ತಿ ಮಾಡಿಕೊಟ್ಟಿರುತ್ತಾರೆ. ನಿಪಿ-1 ಕ್ಕೆ ಸಹಿಯನ್ನು ಆರೋಪಿ ಕನ್ನಡದಲ್ಲಿ ಮಾಡಿದ್ದಾರೆ. ಆರೋಪಿ " ಚಂದ್ರಕಲಾ" ಎಂಬುದಾಗಿ ಮಾತ್ರ ಸಹಿ ಮಾಡಿದ್ದಾರೆ ಆರೋಪಿ ಎರಡು ಸಹಿ ಮಾಡಿದ್ದಾರೆ. ಆರೋಪಿಯ ವಿದ್ಯಾಭ್ಯಾಸದ ಬಗ್ಗೆ ನನಗೆ ಮಾಹಿತಿ ಇಲ್ಲ.

6. ನಿಪಿ-4 ನ್ನು ಆರೋಪಿಯ ತಿಪ್ಪೂರಿನ ವಿಳಾಸಕ್ಕೆ ಹೇಳಿದ್ದೇನೆ. ಆರೋಪಿಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಹಾಗೂ 3 ಬಂದ ನಂತರ ಆರೋಪಿಯನ್ನು ನಾನು ಭೇಟಿ ಮಾಡಿಲ್ಲ. ಆರೋಪಿಗೆ ಹೊರತುಪಡಿಸಿ ನಾನು ಮತ್ಯಾರಿಗೂ ನಾನು ಸಾಲ ನೀಡಿಲ್ಲ.

ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ.

7. ಆರೋಪಿಗೆ ಯಾವುದೇ ಆದಾಯ ಮೂಲ ಇಲ್ಲದ ಕಾರಣ ರೂ. 3 ಲಕ್ಷ ಸಾಲವನ್ನು ಯಾವ ಭರವಸೆಯ ಮೇರೆಗೆ ನೀಡಿದ್ದೀರಾ ಎಂದರೆ ಜಮೀನು ಹಾಗೂ ಬಾಡಿಗೆಗೆ ಓಡಿಸುವ ಗಾಡಿ ಇರುವುದರಿಂದ ಆರೋಪಿಗೆ ಸಾಲ ನೀಡಿದ್ದೆ. ಯಾವುದೇ ಲಾಭಕ್ಕೆ ನಾನು ಆರೋಪಿಗೆ ಸಾಲ ನೀಡಿಲ್ಲ ಆರೋಪಿ ಗ್ರಾಮಸ್ಥರಾದ ಕಾರಣ ನಾನು ಸಾಲ ನೀಡಿದ್ದೆ. ಈ ರೀತಿಯಾಗಿ ನನ್ನ ಗ್ರಾಮಸ್ಥರು ಸಹಾಯಕ್ಕೆ ಸಾಲ ಕೇಳಿದಾಗ ನಾನು ಸಾಲ ನೀಡಿಲ್ಲ ಆರೋಪಿಗೆ ಮೂರು ಜನ ಮಕ್ಕಳು. ಆರೋಪಿಯ ಮಕ್ಕಳು ಒಟ್ಟಾಗಿ ತಂದೆ ತಾಯಿ ಜೊತೆ ಇದ್ದಾರೆ. ರೂ. 3 ಲಕ್ಷವನ್ನು ಆರೋಪಿಯ ಕೈ ಕೊಟ್ಟಿರುತ್ತೇನೆ. ಆರೋಪಿಗೆ ಹಿಂದೆಂದು ನಾನು ಸಾಲ ನೀಡಿರಲಿಲ್ಲ.

8. ಆರೋಪಿಗೆ ಇದ್ದಆದಾಯ ಮೂಲಗಳು ಹಾಗೂ ಇತರೆ ಸಾಲಗಳ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ, ಆರೋಪಿಯ ತಂದೆ ತಾಯಿ ಆರೋಪಿಯೊಂದಿಗೆ ಬಂದು ಭರವಸೆ ನೀಡಿದ್ದರು ಹೀಗಾಗಿ ಸಾಲ ನೀಡಿದ್ದೆ.

9. ದೊಡ್ಡ ಮೊತ್ತದ ಹಣವನ್ನು ನೀಡಬೇಕಾದರೆ ಚೆಕ್ ಮೂಲಕ ನೀಡಬೇಕು ಎಂದರೆ ಇದರ ಬಗ್ಗೆ ನನಗೆ ಮಾಹಿತಿ ಇಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಬೆರಳಚ್ಚು ಮಾಡಲಾಯಿತು).**

**ಓ ಹೇ ಕೇ ಸ ಓ**

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ.ಎಫ್.ಸಿ ಚನ್ನಪಟ್ಟಣ.**